

# ತೇಲುವ ಹಾದಿ!

ನೀರಿನ ಮೇಲೆ ನಡಿಗೆ ಅನ್ನೋದು ಪುರಾಣ ಕಾಲದ ಮಾಂತ್ರಿಕ ಮಂದಿಗೆ ಮಾತ್ರ ಸೀಮಿತವಾಗಿತ್ತು. ಆದ್ರೆ ಈಗಿನ ಕಲಿಯುಗದಲ್ಲಿ ಜನಸಾಮಾನ್ಯರೂ ಸಹ ನೀರಿನ ಮೇಲೆ ನಡೆಯಬಹುದಾಗಿದೆ. ಇಲ್ಲಿ ನೀರ ಮೇಲೆ ನಡಿಗೆಗೆ ಯಾವುದೇ ಮಂತ್ರ ತಂತ್ರಗಳಿಲ್ಲ. ಉತ್ತರ ಇಟಲಿಯ ಇಸೊಯ್(Iseo) ಸರೋವರದ ಮೇಲೆ ತೇಲುವ ಹಾದಿ ಮಾಡಿದ್ದಾರೆ. ವಿನ್ಯಾಸ ಕಲಾವಿದರಾದ ಕ್ರಿಸ್ಟೋ ವ್ಯಾಷೇವ್ ಹಾಗೂ ಜೆನ್ನೆಕ್ಲೌಡೇ.

ಇಸೊಯ್ ಸರೋವರದ ಮೇಲಿನ ಈ ತೇಲುವ ಹಡಗು ಕಟ್ಟೆಗಳನ್ನು ಪ್ಲ್ಯಾಸ್ಟಿಕ್ ಕ್ಯೂಬ್‌ಗಳಿಂದ ಮಾಡಿದ್ದು, ಜನರು ಯಾವುದೇ ಸಹಾಯವಿಲ್ಲದೆ ಆರಾಮಾಗಿ ಸರೋವರದ ನೀರಿನ ಮೇಲೆ ನಡೆದುಕೊಂಡು ಹೋಗಬಹುದು. ಸುಮಾರು 5.5 ಕಿಲೋಮೀಟರ್ ಉದ್ದ ಇರುವ ನೀರಿನ ಮೇಲಿನ ಈ ಹಾದಿ 16 ಮೀಟರ್ ಅಗಲ ಹಾಗೂ 35 ಸೆಂಟಿಮೀಟರ್ ಉದ್ದವಿದೆ. ವಿಶಿಷ್ಟವಾಗಿ ನಿರ್ಮಾಣವಾದ ಈ ತೇಲುವ ಹಾದಿ ಅಲ್ಲಿನ ಎರಡು ದ್ವೀಪಗಳಿಗೆ ಬೆಸೆಯುವ ದಾರಿಯಾಗಿದೆ. ಇನ್ನು ಸರೋವರದ ಮೇಲೆ ತೇಲುವ ಹಳದಿ ಬಣ್ಣ ಪ್ಲ್ಯಾಸ್ಟಿಕ್ ಮೇಲೆ ನಡೆದರೆ ನೀರಿನ ಮೇಲೆಯೇ ನಡೆದ ಹಾಗೆ ಅನುಭವ ಆಗುತ್ತದೆಯಂತೆ. ನೀರು ಪಾದಗಳಿಗೆ ತಾಕದೆ ಇದ್ದರೂ ನೀರಿನ ಮೇಲೆ ನಿಂತಂತೇ, ನೀರಿನ ಮೇಲೆ ನಡೆದಂತೇ ಆಗುತ್ತದೆ ಮತ್ತು ನೂರಾರು ಜನ ಇದರ ಮೇಲೆ ಸರಾಗವಾಗಿ ನಡೆದುಕೊಂಡೇ ಹೋಗಬಹುದು. ಆದರೆ ಯಾವುದೇ ವಾಹನಗಳಿಗೆ ಈ ದಾರಿಯಲ್ಲಿ ಪ್ರವೇಶವಿಲ್ಲ. ಸಾರ್ವಜನಿಕರಿಗೆ ಇಲ್ಲಿ ಮುಕ್ತ ಪ್ರವೇಶವಿದೆ. ರಕ್ಷಣೆಯ ವಿಚಾರವಾಗಿ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಅಂತೆ.

ಕ್ರಿಸ್ಟೋ ವ್ಯಾಷೇವ್ ಹಾಗೂ ಜೆನ್ನೆಕ್ಲೌಡೇ ಅವರು ಈ ಮುಂಚೆ 1970 ರಲ್ಲಿಯೇ ಈ ಯೋಜನೆ ಮಾಡಿದ್ದು ಆದರೆ ಈಗ ಆ ಶುಭ ಘಳಿಗೆ ಕೂಡಿ ಬಂದಿದೆ. ತೇಲುವ ಹಾದಿಯ ಮತ್ತೊಂದು ವಿಶೇಷತೆ ಅಂದರೆ ಈ ಅದ್ಭುತವನ್ನು ಬರೀ 16 ದಿನಗಳಲ್ಲಿ ನಿರ್ಮಿಸಿದ್ದಾರಂತೆ. ಅಂದರೆ ಜೂನ್ 18, 2016 ರಂದು ಪ್ರಾರಂಭಿಸಿ ಜುಲೈ 3, 2016ರ ದಿನಗಳಲ್ಲಿ ನಿರ್ಮಿಸಿದ್ದಾರೆ. ಈಗ ಇಟಲಿಗೆ ಬರುವ ಪ್ರವಾಸಿಗರು ಇಸೊಯ್ (Iseo) ಸರೋವರಕ್ಕೆ ಭೇಟಿ ನೀಡದೆ ಹೋಗಲಾರರು. ಇನ್ನು ಇಸೊಯ್ ಸರೋವರದ ತೇಲುವ ಹಾದಿ ಇಟಲಿಯ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ.

■ ಸೀಮಾ ಕಾರಟಗಿ



